ದಿ:20/9/22 ರಂದು ಉತ್ತರಿಸಲಾಗಿದೆ
ನಿ-72
ಕ್ರ-21

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ ಇವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.

ಸೂಚನೆ:-(ಸಂಖ್ಯೆ: ಕವಿಪ/ಪ್ರಶಾ/21/147ನೇ(ಅ)/ನಿ-72/2022)

ಚಿಂತಾಮಣಿ ತಾಲ್ಲೂಕು ಕಸಬಾ ಹೋಬಳಿ ಮುನಗನಹಳ್ಳಿಯ ಸರ್ವೆ ನಂಬರ್ 36/2ರ ಕೆರೆ ಕಟ್ಟೆ ಮೊದಲಾದ ಜಲಕಾಯಗಳಲ್ಲಿನ ಹಾಗೂ ನಿರ್ಬಂಧಿತ ಪ್ರದೇಶದಲ್ಲಿನ ಅಕ್ರಮ ಕಟ್ಟಡ/ಸಂರಚನೆಗಳನ್ನು ತೆರವುಗೊಳಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಹೇಳಿಕೆ:-

ಚಿಂತಾಮಣಿ ತಾಲ್ಲೂಕು ಕಸಬಾ ಹೋಬಳಿ ಮುನಗನಹಳ್ಳಿಯ ಸ.ನಂ.36/2ರಲ್ಲಿ 0-13 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:ಎಎಲ್ ಎನ್.ಎಸ್.ಆರ್.ಸಕಾಲ(ಚಿಂ)111/2015-16, ದಿನಾಂಕ: 19.01.2016ರಂತೆ ಭೂ ಪರಿವರ್ತನೆ ಯಾಗಿರುತ್ತದೆ.

ಚಿಂತಾಮಣಿ ತಾಲ್ಲೂಕು ಮುನಗನಹಳ್ಳಿ ಗ್ರಾಮ ಪಂಚಾಯಿತಿಗೆ ಶ್ರೀ ಎಂ.ಕೃಷ್ಣಾರೆಡ್ಡಿ ರವರು ದಿನಾಂಕ: 22.01.2016ರ ಮನವಿಯಲ್ಲಿ ಇ-ಸ್ವತ್ತು ನೀಡಲು ಕೋರಿರುತ್ತಾರೆ.

ಸದರಿ ಅರ್ಜಿಯನ್ನು ದಿನಾಂಕ: 02.02.2016ರಲ್ಲಿ ಕಾರ್ಯದರ್ಶಿ, ಮುನಗನಹಳ್ಳಿ ಗ್ರಾಮ ಪಂಚಾಯಿತಿ. ಚಿಂತಾಮಣಿ ತಾಲ್ಲೂಕು ರವರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಂತಾಮಣಿ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಂತಾಮಣಿ ರವರ ಪತ್ರ ಸಂಖ್ಯೆ: ತಾಪಂಚಿಂ.ನಿವೇಶನ.ಸಿ.ಆರ್/2015-16, ದಿನಾಂಕ: 24.03.2016ರ ಪತ್ರದಲ್ಲಿ ಸದರಿ ಭೂ ಪರಿವರ್ತನೆಗೊಂಡ ಜಮೀನಿಗೆ ಸರ್ಕಾರದ ಪತ್ರದ ಸಂಖ್ಯೆ: ಗ್ರಾಅಪ 86 ಗ್ರಾಅಪ 2014, ದಿನಾಂಕ:11.11.2014ರಂತೆ ಒಂದು ಎಕರೆಗಿಂತ ಕಡಿಮೆ ಇರುವ ಜಮೀನಿಗೆ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಅವಕಾಶವಿರುವುದರಿಂದ ಏಕ ನಿವೇಶನ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, ದಿನಾಂಕ: 06.08.2016 ರಂದು ನಡೆದ ಮುನಗನಹಳ್ಳಿ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಠರಾವು ಸಂಖ್ಯೆ:06 ರಲ್ಲಿ ಖಾತೆ ಮಾಡಲು ಅನುಮೋದನೆ ನೀಡಿರುವಂತೆ ಸದರಿ ಏಕನಿವೇಶನಕ್ಕೆ ನಮೂನೆ-9 ಮತ್ತು 11ನ್ನು ವಿತರಿಸಲಾಗಿರುತ್ತದೆ.

ಈ ಸಂಬಂಧ ಶ್ರೀ ನವೀನ್ ಆರ್.ಬಿನ್.ರಾಮಸ್ವಾಮಿ ರವರು ಸ.ನಂ.36/2ರ ಜಮೀನಿಗೆ ಹೊಂದಿಕೊಂಡಂತೆ ಸ.ನಂ.39ರ ಜಮೀನು ಸರ್ಕಾರಿ ಕೆರೆ ಪ್ರದೇಶವಿದ್ದು, ಸದರಿ ಕೆರೆಯ ಬಫರ್ ಜೋನ್ ಪ್ರದೇಶದಲ್ಲಿ ಅಕ್ರಮ ಕಟ್ಟಡ ಸಂರಚನೆಗಳು ಕಟ್ಟಿರುವ ಕಟ್ಟಡಗಳನ್ನು ತೆರವುಗೊಳಿಸಲು ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 7923/2022 (LB-RES-PIL) ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವು ಪ್ರಸ್ತುತ ವಿಚಾರಣಾ ಹಂತದಲ್ಲಿ ಬಾಕಿ ಇದ್ದು, ಮಾನ್ಯ ನ್ಯಾಯಾಲಯದ ಅಂತಿಮ ಆದೇಶದ ನಂತರ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು.

ಆರ್‌ಡಿ 180 ಎಲ್‌ಜಿಕ್ಯೂ 2022

(ಆರ್. ಅಶೋಕ)
ಕಂದಾಯ ಸಚಿವರು